# ಸಮಾನ ಹಕ್ಕುಗಳಿಗಾಗಿ ಪಾದಯಾತ್ರೆ

ಸಂಚಾರ ಜಂಕ್ಷನ್ ಬಳಿ ಸಿಗ್ನಲ್ ಜಂಪಿಂಗ್ ಮಾಡುವವರ ಮೇಲೆ ಕಣ್ಗಾವಲಿಗೆ ಕ್ಯಾಮೆರಾಗಳಿದ್ದರೂ ಪ್ರಮುಖ ಜಂಕ್ಷನ್‌ಗಳಲ್ಲಿ ಬಿಸಿರಕ್ತದ ತರುಣರ ಅಸಹನೆ ಹಲವಾರು ಬಾರಿ ಸಂಚಾರ ವಾರ್ಡನ್‌ಗಳನ್ನು ರಸ್ತೆಗೆ ಬರುವಂತೆ ಮಾಡುತ್ತಿತ್ತು. ಸದಾ ಆಕ್ಸಿಲರೇಟರ್ ಮೇಲೆ ಕಾಲಿರಿಸಿ 'ಬುರ್ ಬುರ್' ಎಂದು ಗುರುಗುಡುವ ಅವರ ಮೇಲೆ ಎಷ್ಟು ನಿಗಾ ವಹಿಸಿದರೂ ಸಾಲದೇನೋ. ಯಾಂತ್ರಿಕವಾಗಿ ಉಲ್ಲಂಘನೆ ಮಾಡುವವರ ಮೇಲೆ ದಂಡ ಪಾವತಿಸಲು ಸೂಚನೆಗಳು ಅವರ ಮೊಬೈಲ್ ನಂಬರ್‌ಗೆ ರವಾನೆಯಾಗಿ ಅವರ ಬ್ಯಾಂಕ್ ಖಾತೆಯಿಂದ ಪೂರ್ವ ನಿರ್ದೇಶನದಂತೆ ಮೊತ್ತ ಕಟಾವಾಗುತ್ತಿತ್ತು. ಜಂಕ್ಷನ್‌ನಲ್ಲಿದ್ದ ವೇಗ ಸೂಚಕ ರೊಬೋಗಳು ಕಂಡುಬಂದೊಡನೆ ಎಚ್ಚರಿಸುತ್ತಿತ್ತು.

ಅವಳು ತೊಟ್ಟ ರಿಫ್ಲೆಕ್ಟರ್ ವಸ್ತ್ರದಿಂದ ಅವಳ ಇರುವಿಕೆ ಸಾಬೀತಾಗುತ್ತಿದ್ದರೂ ಯಾವುದೋ ಲೋಕದಲ್ಲಿ ವಿಹರಿಸುತ್ತಿದ್ದಂತಿದ್ದ ಅವರುಗಳಿಗೆ ಪಾಠ ಕಲಿಸುವುದು ಒಳಿತೆಂದು ಒಂದಿಬ್ಬರು ಉಲ್ಲಂಘಿತರ ವಾಹನಗಳನ್ನು ರೊಬೋ ಕಾಪ್‌ಗಳ ಸಹಾಯದಿಂದ ಬದಿಗೆ ಹಾಕಿಸಿ ವಾಹನದ 'ಕೀ' ತನ್ನ ವಶಕ್ಕೆ ಪಡೆದಳು. ಅವಳ ಎಂ.ಪಿ. ವಾಕಿಯಲ್ಲಿ ಆ ವಾಹನದ ಸಂಖ್ಯೆ ನಮೂದಿಸುತ್ತಿದ್ದಂತೆಯೇ ವ್ಯಕ್ತಿಯ ಪೂರ್ವಾಪರಗಳು ಹಾಗೂ ವಾಹನವನ್ನು ದುರಸ್ತಿ ಮಾಡಿದ ದಿನ, ಆತನು ವಾಹನ ಪರವಾನಗಿ ನವೀಕರಿಸಿದ ದಿನ, ಇತ್ಯಾದಿ ನಮೂನೆಗಳು ನಮೂದಾಗಿ ಅದಕ್ಕೆ ಸಂಚಾರ

